**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 67/2017**

ಚಾ.ಸಾ–07, ಪ್ರಾ.ಸಾ–04

| | | |
|---|---|---|
| ಹೆಸರು | : | ರಾಮೇಶ್ವರ |
| ತಂದೆಯ ಹೆಸರು | : | ಬಸವಣ್ಣ |
| ವಯಸ್ಸು | : | 40 |
| ವೃತ್ತಿ | : | ಪೊಲೀಸ್ ಪೇದೆ, ಬಿಳಿಗೆರೆ ಪೊಲೀಸ್ ಠಾಣೆ, ನಂಜನಗೂಡು ತಾಲ್ಲೂಕು. |
| ವಾಸ | : | ನಂಜನಗೂಡು |

**ದಿನಾಂಕ 06.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 03.07.2014 ರಿಂದ 2022 ರವರೆಗೆ ನಾನು ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆ.

ದಿನಾಂಕ 17.04.2015 ರಂದು ತಿ. ನರಸೀಪುರ ತಾಲ್ಲೂಕಿನ ಕೋಣಗಳ್ಳಿ ಗ್ರಾಮದ ಸರ್ವೆ ನಂ.26 ರಲ್ಲಿ ಸ್ಮಶಾನಕ್ಕಾಗಿ ಇದ್ದ ಜಾಗದ ಒತ್ತುವರಿಯನ್ನು ತೆರವುಗೊಳಿಸಲು ಕಂದಾಯ ಅಧಿಕಾರಿಗಳು, ಸರ್ವೆ ಇಲಾಖೆಯ ಅಧಿಕಾರಿಗಳು, ನಾನು ಮತ್ತು ಚಾಸಾ–9 ಸೇರಿ ಅಲ್ಲಿಗೆ ಬೆಳಿಗ್ಗೆ 10.30 ಗಂಟೆಗೆ ಹೋಗಿದ್ದೆವು. ಜೆ.ಸಿ.ಬಿ.ಯನ್ನು ಬಳಸಿ ಆ ಒತ್ತುವರಿಯನ್ನು ತೆರವು ಮಾಡಲು ಮುಂದಾದಾಗ ಸುಮಾರು ಬೆಳಿಗ್ಗೆ 11.30 ಗಂಟೆಗೆ 1 ರಿಂದ 3, 5, 9ನೇ ಆರೋಪಿತರು ಮತ್ತು ಇತರ ವ್ಯಕ್ತಿಗಳು ಆ ಕೆಲಸವನ್ನು ಮಾಡದಂತೆ ಅಡ್ಡಿಪಡಿಸಿರುತ್ತಾರೆ.

**ಸಿಸಿ ಸಂಖ್ಯೆ: 67/2017**

**ಪಾಟೀ ಸವಾಲು : ಶ್ರೀ ಎಸ್.ಜೆ. ವಕೀಲರಿಂದ ಆರೋಪಿತರ ಪರವಾಗಿ:**

ಸದರಿ ತೆರವು ಕಾರ್ಯಚರಣೆಯ ಕರ್ತವ್ಯಕ್ಕೆ ನಾವು ಹೋಗಲು ತಹಶೀಲ್ದಾರ್ ರವರು ನಮ್ಮ ಪೊಲೀಸ್ ಠಾಣೆಗೆ ಆದೇಶವನ್ನು ಕಳುಹಿಸಿದ್ದು, ನಮ್ಮ ಠಾಣೆಯ ಪೊಲೀಸ್ ಉಪ ನಿರೀಕ್ಷಕರ ಆದೇಶದ ಮೇರೆಗೆ ನಾವು ಆ ಕರ್ತವ್ಯಕ್ಕೆ ಹೋಗಿದ್ದೇವು. ತಹಶೀಲ್ದಾರ್ ರವರು ನೀಡಿದ ಆದೇಶದ ಪ್ರತಿಯನ್ನು ಈ ಪ್ರಕರಣದ ತನಿಖಾಧಿಕಾರಿಗೆ ನಾನು ನೀಡಿಲ್ಲ.

ಘಟನಾ ಸ್ಥಳದ ಉತ್ತರದ ಕಡೆಗೆ ಜಮೀನುಗಳು ಇವೆ ಎಂದರೆ ಸರಿ. ಆ ಜಮೀನುಗಳು ಉತ್ತರದ ಕಡೆಗೆ ಹರಿಜನರಿಗೆ ಸ್ವಾಧೀನಗೊಂಡಿರುವ ಸ್ಮಶಾನದ ಜಾಗವಿದೆ ಎಂದರೆ ಸರಿ. ಆ ಜಾಗದ ಬಳಿ ಪೂರ್ವ ಪಶ್ಚಿಮವಾಗಿ ರಸ್ತೆಯಿದೆ ಎಂದರೆ ಸರಿ. ಆ ರಸ್ತೆಯ ಪಕ್ಕದ ಜಮೀನುಗಳನ್ನು ಈ ಮೇಲೆ ಹೇಳಿದ ಆರೋಪಿತರು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಕಂದಾಯ ಅಧಿಕಾರಿಗಳು ಹೇಳಿದ್ದರಿಂದ ನನಗೆ ಗೊತ್ತಾಯಿತು. ಅವರು ನನಗೆ ದಾಖಲೆಗಳನ್ನು ತೋರಿಸಿಲ್ಲ. ಸರ್ಕಾರಿ ದಾಖಲೆಗಳ ಪ್ರಕಾರ ಈ ಮೇಲೆ ಹೇಳಿದ ಆರೋಪಿತರಿಗೆ ಆ ರಸ್ತೆಯ ಪಕ್ಕ ಜಮೀನುಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ, ಕಂದಾಯ ಅಧಿಕಾರಿಗಳ ಹೇಳಿಕೆಯ ಮೇರೆಗೆ ಈ ಮೇಲೆ ಹೇಳಿದ ಆರೋಪಿತರು ಒತ್ತುವರಿ ಮಾಡಿಕೊಂಡಿದ್ದರು ಎಂದು ಹೇಳುತ್ತಿದ್ದೇನೆ ಎಂದರೆ ಸರಿ.

**ಸಿಸಿ ಸಂಖ್ಯೆ: 67/2017**

ಸ್ಥಳದಲ್ಲಿ ಅಧಿಕಾರಿಗಳಾದ ನಾವೆಲ್ಲರೂ ಸೇರಿ ಒಟ್ಟು ಆರು ಜನರಿದ್ದೆವು. ಈ ಮೇಲೆ ಹೇಳಿದ ಆರೋಪಿತರು ಸ್ಥಳದಲ್ಲಿ ದಸ್ತಗಿರಿ ಮಾಡಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಘಟನೆಯ ದಿನವೆ ನಾನು ತನಿಖಾಧಿಕಾರಿಗೆ ನನ್ನ ಹೇಳಿಕೆ ನೀಡಲು ನನಗೆ ತೊಂದರೆ ಇರಲಿಲ್ಲ.

ಈ ಮೇಲೆ ಹೇಳಿದ ಆರೋಪಿತರು ನನಗೆ ಮೊದಲಿನಿಂದಲೂ ಪರಿಚಯದವರಲ್ಲ. ಅವರ ಹೆಸರುಗಳನ್ನು ಫ್ರಾಸಾ-3 ರವರು ನನಗೆ ಹೇಳಿದ್ದರು. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಘರ್ಷಣೆಯಾಗಿಲ್ಲ ಎಂದರೆ ಸರಿ. ಹಾಗಾಗಿ, ಅವರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ.

ಸದರಿ ಕೋಣಗಳ್ಳಿ ಗ್ರಾಮದ ಜಯಪ್ಪ ಎನ್ನುವವರ ಮಾತಿನ ಮೇರೆಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**